700072

No. of Printed Pages : 5

**6204**

*Register Number*

# Language – Part I – KANNADA – Paper I

**Time : 3 Hours ]** **[ Maximum Marks : 100**

**ಸೂಚನೆ :** (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ಪಷ್ಟವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ಪಷ್ಟತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಉತ್ತರ ಬರೆಯಲು ಕಪ್ಪು ಅಥವಾ ನೀಲಿ ಶಾಯಿಯನ್ನು ಉಪಯೋಗಿಸಿ.

**I.** ಈ ಕೆಳಗಿನ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ **ನಾಲ್ಕೈದು** ಸಾಲುಗಳಿಗೆ ಮೀರದಂತೆ ಉತ್ತರಿಸಿ. **4x2=8**

Answer **any four** of the following questions in not more than **4** lines each.

1. ಜಲಚಕ್ರ ಎಂದರೇನು ?

2. ಕುಡುಕ ಕರಿಯಪ್ಪನ ರೂಪ ಹೇಗಿತ್ತು ?

3. ಧರ್ಮ ಎಂದರೆ ಏನು ?

4. ಕಬೀರ ದಾಸರು ಮನುಷ್ಯ ಸ್ವಭಾವವನ್ನು ಹೇಗೆ ವರ್ಣಿಸಿದ್ದಾರೆ ?

5. ಸಂಸ್ಕೃತಿ ಎಂದರೇನು ? ಅದರ ಗುರುತುಗಳು ಯಾವುವು ?

6. ದ್ರುಪದನು ತನ್ನ ಮಗಳ ಸ್ವಯಂವರಕ್ಕಾಗಿ ಏನು ಮಾಡಿದನು ?

**II.** ಈ ಕೆಳಗಿನ **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಹತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿ. **3x4=12**

Answer **any three** of the following questions in not more than **10** lines each.

7. ಯಾವುದು ಗಂಧರ್ವರ ಸೀಮೆಯಾಯಿತು ? ಏಕೆ ?

8. ನಾಗಿಯು ಹೇಗೆ ದುರ್ಮರಣಕ್ಕೆ ಒಳಗಾದಳು ?

9. ಮುದುಕಿಯು ಬರೆದಿದ್ದ ರಂಗವಲ್ಲಿ ಹೇಗಿದ್ದಿತು ?

10. ಕವಿಗೆ ಹಿಂದಿನ ಮನೆಗಳಲ್ಲಾದ ಕಹಿ ಅನುಭವಗಳೇನು ?

11. ಮಾನವೀಯತೆಯ ಬಗ್ಗೆ ಕವಿ ಹೇಳುವ ವಿಚಾರಗಳೇನು ?

[ Turn over

III. ಈ ಕೆಳಗಿನ **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಹತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿ. 3x4=12
Answer **any three** of the following questions in not more than **10** lines each.

12. ಭರತ – ಬಾಹುಬಲಿಗಳು ಯಾವ ರೀತಿಯ ಯುದ್ಧಕ್ಕೆ ಒಪ್ಪುತ್ತಾರೆ ?

13. ಕೃಷ್ಣಾರ್ಜುನರು ಮಾಡಿದ ಉಪಾಯವೇನು ? ವಿವರಿಸಿ.

14. ವಸಂತ ಕಾಲ ಬಂದಾಗ ಪ್ರಕೃತಿ ಹೇಗೆ ಮಾರ್ಪಾಟುಗೊಂಡಿತು ?

15. ಕೆಟ್ಟ ಮನಸ್ಸುಳ್ಳವರಿಗೆ ಶಿವದೀಕ್ಷೆ ಕೊಟ್ಟರೆ ಏನಾಗುತ್ತದೆ ?

16. ದುರ್ಯೋಧನ–ಶಲ್ಯರ ಗುಣಸ್ವಭಾವಗಳನ್ನು ಈ ಪದ್ಯಭಾಗದ ಆಧಾರದಿಂದ ನಿರೂಪಿಸಿ.

17. 'ನವ ವಿಧಾತರು' – ಎಂಬ ಪದವನ್ನು ಕವಿ ಹೇಗೆ ಸಮರ್ಥಿಸಿದ್ದಾರೆ ?

IV. ಈ ಕೆಳಗಿನ **ಯಾವುದಾದರೊಂದು** ಪ್ರಶ್ನೆಗೆ **ಇಪ್ಪತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿ. 1x8=8
Answer **any one** of the following questions in not more than **20** lines each.

18. ಕುಡುಕ ಕರಿಯಪ್ಪನ ದಾರುಣ ಕತೆಯನ್ನು ವಿವರವಾಗಿ ಬರೆಯಿರಿ.

19. ಬೆಲೆಗೊಟ್ಟು ತಾರ ಮಧುವಂ – ಎಂಬ ಮಾತನ್ನು ಕವಿ ಹೇಳಲು ಕಾರಣವೇನು ? ವಿಮರ್ಶಿಸಿ.

20. ದ್ರುಪದನು ರಚಿಸಿದ ಸ್ವಯಂವರ ಮಂದಿರವು ಹೇಗಿತ್ತು ?

V. ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೊಂದಕ್ಕೆ ಇಪ್ಪತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿ. 1x10=10
Answer **any one** of the following questions in not more than **20** lines each.

21. 'ನಾಗಿ' ಕಥನ ಕವನದ ಸಾರಾಂಶವನ್ನು ಬರೆಯಿರಿ.

22. ಯಾವಾಗ ಭಕ್ತಿ ಕಂಪಿತವಾಗುವುದೆಂದು ಬಸವಣ್ಣನವರು ಹೇಳಿದ್ದಾರೆ ?

23. ದುರ್ಯೋಧನನು ಶಲ್ಯನನ್ನು ಸಾರಥಿಯಾಗಲು ಒಪ್ಪಿಸಿದ ಸನ್ನಿವೇಶದ ಸ್ವಾರಸ್ಯವನ್ನು ವಿಶದಪಡಿಸಿ.

VI. ಈ ಪದ್ಯ ಭಾಗಗಳನ್ನು ಪೂರ್ಣಗೊಳಿಸಿ. 2x5=10
Quote from memory :

24. ಎಲೆಗಳ ಮೇಲೆ . . . . . . . . . . . . .
. . . . . . . . . . . . . . . . . . . .
. . . . . . . . . . . . . . . . . . . .
. . . . . . . . . . . . . ಇಲ್ಲಿಗೇ ತಂದು

25. ಕೇಳು ಜನಮೇಜಯ . . . . . . . . . . .
. . . . . . . . . . . . . . . . . . . .
. . . . . . . . . . . . . . . . . . . .
. . . . . . . . . . . . . . . ತಪೋವನವ

**VII.** ಈ ಕೆಳಗಿನವುಗಳಲ್ಲಿ **ಯಾವುದಾದರೂ ಎರಡನ್ನು** ಸಂದರ್ಭ ಸಹಿತ ವಿವರಿಸಿ. **2x5=10**
Answer **any two** of the following.

26. ಇದು ಬರಿ ಬೆಳಗಲ್ಲೋ ಅಣ್ಣಾ.

27. ಸಾಯಬಾರದೇಕೆ ನೀನು ನಿನ್ನ ಋಣವು ತೀರಲಿ.

28. ಕೆರೆಯ ನೀರನು ಕೆರೆಗೆ ಚೆಲ್ಲಿ.

29. ಹೆದರದಿರು ನುಡಿ ತಾಯೇ ನನ್ನ ಮಗುವೇ.

**VIII. (A)** ಈ ಕೆಳಗಿನವುಗಳಲ್ಲಿ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **2x5=10**
Answer **any two** of the following questions.

30. ಲೋಪ ಸಂಧಿ ಅಥವಾ ಗುಣ ಸಂಧಿಯನ್ನು ಉದಾಹರಣೆ ಸಹಿತ ವಿವರಿಸಿ.

31. ದ್ವಿಗು ಸಮಾಸ ಅಥವಾ ತತ್ಪುರುಷ ಸಮಾಸವನ್ನು ಉದಾಹರಣೆ ಸಹಿತ ವಿವರಿಸಿ.

32. ರೂಪಕ ಅಲಂಕಾರ ಅಥವಾ ದೀಪಕ ಅಲಂಕಾರವನ್ನು ಉದಾಹರಣೆಸಹಿತ ವಿವರಿಸಿ.

33. ತ್ರಿಪದಿ ಅಥವಾ ಕಂದಪದ್ಯವನ್ನು ಉದಾಹರಣೆ ಸಹಿತ ವಿವರಿಸಿ.

**(B)** ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. **5x1=5**
Match the following.

| | | | |
|---|---|---|---|
| 34. | ಬೆಳಗು | – | ಎಚ್.ಎಸ್. ವೆಂಕಟೇಶ ಮೂರ್ತಿ |
| 35. | ರಂಗವಲ್ಲಿ | – | ಗೋಪಾಲಕೃಷ್ಣ ಅಡಿಗ |
| 36. | ಮನೆಯಿಂದ ಮನೆಗೆ | – | ಅಂಬಿಕಾತನಯ ದತ್ತ |
| 37. | ನಾವೆಲ್ಲರೂ ಒಂದೇ ಜಾತಿ | – | ಪು.ತಿ. ನರಸಿಂಹಾಚಾರ್ |
| 38. | ಶಿಶಿರದ ಪಾಡು | – | ಕೆ.ಎಸ್. ನರಸಿಂಹಸ್ವಾಮಿ |

[ Turn over

**IX.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 15x1=15

Choose the correct answer for the following questions.

39. ಕನ್ನಡದ ಮೊದಲ ಕಾವ್ಯ :
(ಅ) ವಡ್ಡಾರಾಧನೆ (ಆ) ಕವಿರಾಜಮಾರ್ಗ (ಇ) ಆದಿಪುರಾಣ

40. ಮಧುವ್ರತ – ಪಾಠದ ಲೇಖಕರು :
(ಅ) ದೇವುಡು (ಆ) ಎನ್. ಪ್ರಹ್ಲಾದರಾವ್ (ಇ) ಡಾ॥ ಜಿ. ರಾಮಕೃಷ್ಣ

41. ಮಹೋತ್ಸವ ಎಂಬುದು ಯಾವ ಸಂಧಿ ?
(ಅ) ಗುಣ ಸಂಧಿ (ಆ) ಯಣ್ ಸಂಧಿ (ಇ) ಲೋಪ ಸಂಧಿ

42. ಕಾರ್ಯ – ಎಂಬ ಪದದ ತದ್ಭವ ರೂಪ :
(ಅ) ಅಕಾರ್ಯ (ಆ) ಕಜ್ಜ (ಇ) ಕಜ್ಜಾಯ

43. ರತ್ನಾಕರವರ್ಣಿಯ ಕಾಲ :
(ಅ) 15 ನೇ ಶತಮಾನ (ಆ) 16 ನೇ ಶತಮಾನ (ಇ) 17 ನೇ ಶತಮಾನ

44. ಬಿರುಗಾಳಿ – ಎಂಬುದು ಯಾವ ಸಮಾಸ ?
(ಅ) ಕರ್ಮಧಾರಯ ಸಮಾಸ
(ಆ) ಅಂಶಿ ಸಮಾಸ
(ಇ) ದ್ವಿಗು ಸಮಾಸ

45. ಅನುಭವ – ಪದದ ವಿರುದ್ಧ ಪದವೇನು ?
(ಅ) ಅನಭವ (ಆ) ಅನನುಭವ (ಇ) ಅನ್ನುಭವ

46. ಷಟ್ಪದಿಯಲ್ಲಿರುವ ಸಾಲುಗಳ ಸಂಖ್ಯೆ ಎಷ್ಟು ?
(ಅ) ನಾಲ್ಕು (ಆ) ಮೂರು (ಇ) ಆರು

47. 'ಪಾಂಡುವಿನ ಮರಣ' ಪದ್ಯದ ಕವಿ ಯಾರು ?
(ಅ) ಕುಮಾರವ್ಯಾಸ (ಆ) ಲಕ್ಷ್ಮೀಶ (ಇ) ಕುವೆಂಪು

48. ಜಲಾವೃತ – ಪದವನ್ನು ಬಿಡಿಸಿ ಬರೆದಾಗ :
(ಅ) ಜಲ + ಆವೃತ (ಆ) ಜಲ + ವೃತ (ಇ) ಜಾಲ + ವೃತ

49. ಬಾನು – ಪದದ ಅರ್ಥವೇನು ?
(ಅ) ಆಕಾಶ (ಆ) ಭೂಮಿ (ಇ) ಸಮುದ್ರ

50. ಬಟ್ಟೆಬರೆ – ಎಂಬುದು ಒಂದು :
(ಅ) ಜೋಡಿ ಪದ (ಆ) ದ್ವಿರುಕ್ತಿ ಪದ (ಇ) ತತ್ಸಮ ಪದ

51. ಸೆರಗೊಡ್ಡಿ ಬೇಡು – ಎಂಬುದು ಒಂದು :
(ಅ) ನುಡಿಗಟ್ಟು (ಆ) ಸಮಾಸ ಪದ (ಇ) ಅಲಂಕಾರ

52. ಕನ್ನಡದ ಮೊದಲ ಶಾಸನ :
(ಅ) ಹಲ್ಮಿಡಿ ಶಾಸನ (ಆ) ಬಾದಾಮಿ ಶಾಸನ (ಇ) ಸಾರನಾಥ ಶಾಸನ

53. ಪದ್ಯದ ನಿಯಮವನ್ನು ತಿಳಿಸುವ ಶಾಸ್ತ್ರ :
(ಅ) ಛಂದಸ್ಸು (ಆ) ವ್ಯಾಕರಣ (ಇ) ಮೀಮಾಂಸೆ

-oOo-